# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 02-01-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮೈಸೂರು ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

### ಹವಾಮಾನದ ಮುನ್ಸೂಚನೆ (03–01–2024 ರಿಂದ 07–01–2024)

| Parameters | 03.01.2024 | 04.01.2024 | 05.01.2024 | 06.01.2024 | 07.01.2024 |
|---|---|---|---|---|---|
| ಮಳೆ (ಮಿ.ಮೀ) | 1 | 1 | 1 | 1 | 1 |
| ಗರಿಷ್ಠ ಉಷ್ಣಾಂಶ ($^0$ಸೆ) | 30 | 30 | 30 | 29 | 28 |
| ಕನಿಷ್ಠ ಉಷ್ಣಾಂಶ ($^0$ಸೆ) | 17 | 17 | 17 | 18 | 18 |
| ಮೋಡ (ಆಕ್ಟ್ಸ್) | 3 | 5 | 5 | 5 | 5 |
| ಗರಿಷ್ಠ ಗಾಳಿಯ ತೇವಾಂಶ (%) | 87 | 87 | 87 | 90 | 90 |
| ಕನಿಷ್ಠ ಗಾಳಿಯ ತೇವಾಂಶ (%) | 82 | 82 | 82 | 85 | 85 |
| ಗಾಳಿಯ ವೇಗ (ಕಿ.ಮೀ/ಗಂಟೆ) | 1 | 2 | 2 | 1 | 3 |
| ಗಾಳಿಯ ದಿಕ್ಕು (ಡಿಗ್ರಿ) | 90 | 90 | 77 | 77 | 77 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಮೈಸೂರು ಜಿಲ್ಲೆಯಲ್ಲಿ ದಿನಾಂಕ: 03–01–2024 ರಿಂದ 07–01–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಹಗುರ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 28–30 °C ಮತ್ತು ಕನಿಷ್ಠ ಉಷ್ಣಾಂಶ 17–18 °C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ. 87–90 % ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 82–85 % ವರೆಗೆ ಮತ್ತು ಗಾಳಿಯು ಗಂಟೆಗೆ 1–3 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

### ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

- ಜಿಲ್ಲೆಯಲ್ಲಿ ಮುಂದಿನ 3–5 ದಿನಗಳು ಹಗುರ ಮಳೆ ಬರುವ ಸಾಧ್ಯತೆ ಇರುವುದರಿಂದ ಬೆಳೆಗಳ ಕಟಾವು ಮಾಡುವ ರೈತರು ಸೂಕ್ತ ಮುನ್ನೆಚ್ಚರಿಕೆವಹಿಸಬೇಕು.
- ಕಟಾವು ಮಾಡಿದದವಸ ಧಾನ್ಯಗಳನ್ನು ಚೆನ್ನಾಗಿ ಒಣಗಿಸಿ ಹೆಚ್ಚು ದಿನ ಕೆಡದಂತೆ ಇಡಲು ಏಕದಳ ಧಾನ್ಯಗಳ ತೇವಾಂಶ ಶೇಕಡ 11 ರಿಂದ 12ರಷ್ಟು, ದ್ವಿದಳ ಧಾನ್ಯಗಳ ತೇವಾಂಶ ಶೇಕಡ 9 ರಷ್ಟು, ಎಣ್ಣೆಕಾಳುಗಳ ತೇವಾಂಶ ಶೇಕಡ 8 ರಷ್ಟು ಮತ್ತುತರಕಾರಿ ಬೀಜಗಳ ತೇವಾಂಶ ಶೇಕಡ 5 ರಿಂದ 6 ರಷ್ಟು ಇರಬೇಕು.

- ಭತ್ತದ ಕಟಾವಿನ ನಂತರ ಗದ್ದೆಗಳಲ್ಲಿರುವ ತೇವಾಂಶದ ಉಪಯೋಗ ಪಡೆಯಲು ದ್ವಿದಳ ಧಾನ್ಯಗಳಾದ ಹೆಸರು, ಅಲಸಂದೆ, ಉದ್ದನ್ನು ಬೆಳೆಯಬಹುದು.
- ಕಟಾವಿನ ನಂತರ ಕಡಿಮೆ ತೇವಾಂಶವಿದ್ದು ಯಾವುದೇ ಬೆಳೆಗಳನ್ನು ಬೆಳೆಯಲಾಗದ ಭತ್ತದ ಗದ್ದೆಗಳಲ್ಲಿ ಗದ್ದೆಗಳನ್ನು ಹಾಗೇ ಬಿಡದೆ ಮಾಗಿ ಉಳುಮೆ ಮಾಡಿ. ಇದರಿಂದ ಮುಂದಿನ ಬೆಳೆಗೆ ರೋಗ ಹಾಗೂ ಕೀಟಗಳ ಭಾದೆ ಕಡಿಮೆಯಾಗುವುದು. ಮಳೆಯ ನೀರು

| | | |
|---|---|---|
| ಭೂಮಿಯಲ್ಲಿ ಇಂಗುವುದು. | | |
| ಬಾಳೆ | ಎಲೆ ಮಡಿಸುವ ಹುಳು | ಈ ಕೀಟದ ನಿಯಂತ್ರಣಕ್ಕಾಗಿ 0.3 ಮಿ.ಲೀ ಫ್ಲುಬೆಂಡಿಯಮೈಡ್ 48 ಎಸ್.ಸಿ ಎಂಬ ಕೀಟನಾಶಕವನ್ನು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. |
| ಕುಂಬಳಕಾಯಿ ಮತ್ತು ಸೌತೆಕಾಯಿ | ಬೂಜು ರೋಗ ಹಾಗೂ ಬೂದಿ ರೋಗ | ಬೂಜು ರೋಗ: ಮೊದಲಿಗೆ ಕೋನಾಕಾರದ ಹಳದಿ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ಅವು ಒಂದಕ್ಕೊಂದು ಸೇರಿಕೊಂಡು, ಎಲೆಗಳು ಒಣಗುತ್ತವೆ. ಮೆಟಲಾಕ್ಸಿಲ್+ಮ್ಯಾಂಕೋಜೆಬ್@ 2 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>ಬೂದಿ ರೋಗ: ಮೊದಲಿಗೆ ಸೂಕ್ಷ್ಮಗಾತ್ರದ, ಬಿಳಿ ಬೂದು ಬಣ್ಣದ ಚುಕ್ಕೆಗಳು ಎಲೆ ಮತ್ತು ಕಾಂಡಗಳ ಮೇಲೆ ಕಾಣಿಸುತ್ತವೆ. ರೋಗದ ತೀವ್ರತೆ ಹೆಚ್ಚಾದಾಗ ಎಲೆಗಳು ಪೂರ್ತಿ ಒಣಗುತ್ತವೆ. ಕಾರ್ಬೆಂಡಜಿಂ @ 1 ಗ್ರಾಂ/ಲೀ. ನೀರಿಗೆ, (180 ಗ್ರಾಂ/ಎಕರೆಗೆ.) ಅಥವಾ ಡೈನೊಕಾಪ್ 1.5 ಗ್ರಾಂ/ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.<br>ಪ್ರತಿ ಎಕರೆಗೆ 200 ಲೀಟರ್ ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ. 2 ವಾರಗಳ ಅಂತರದಲ್ಲಿ ತಿಳಿಸಿದ ಶಿಲೀಂಧ್ರ ನಾಶಕದ ದ್ರಾವಣದಿಂದ ಮೂರು ಸಾರಿ ಸಿಂಪಡಿಸಬೇಕು. |
| ತೊಗರಿ | ಕಾಯಿಕೊರಕ | ಈ ಹುಳವು ಹೂ ಮೊಗ್ಗು ಕೊರೆಯುತ್ತವೆ. ಹೂ ಉದುರುವುದು, ಕಾಯಿಗಳನ್ನು ಕೊರೆದು ಕಾಳುಗಳನ್ನು ತಿನ್ನುತ್ತವೆ. ಇದರ ಹತೋಟಿಗಾಗಿ ಬೆಳೆ ಹೂ ಮೊಗ್ಗು ಮತ್ತು ಹೂವಿನ ಹಂತದಲ್ಲಿದ್ದಾಗ 0.5 ಮಿಲೀ. ಇಂಡೋಕ್ಸಾಕಾರ್ಬ್ 14.5 ಎಸ್.ಸಿ. ಅಥವಾ 0.5 ಮಿಲೀ ಕ್ಲೋರಂಟ್ರಾನಿಲಿಪ್ರೋಲ್ 18.5 ಎಸ್.ಸಿ. ಔಷದಿಯನ್ನ ಒಂದು ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು. |
| ಕಬ್ಬು | ತರಗು ನಿರ್ವಹಣೆ | ಕಬ್ಬು ಕಟಾವು ಮುಗಿದ ಮೇಲೆ ಗರಿ ಅಥವಾ ತರಗನ್ನು ಜಮೀನಿನಲ್ಲೆ ಪರ್ಯಾಯ ಸಾಲುಗಳಲ್ಲಿ ಹರಡಿ ನೀರು ಹಾಯಿಸಿ, ಎಕರೆಗೆ 15 ಕಿ. ಗ್ರಾಂ ಯೂರಿಯವನ್ನು ಬೆರಸಿದ ಶೇ. 5ರ ಸಗಣಿ ಬಗ್ಗಡವನ್ನು ಚಿಮುಕಿಸುವುದು.<br>ಪ್ಲೋರೋಟಸ್ ಸೂಕ್ಷ್ಮಾಣು ಜೀವಿಯನ್ನು ಎಕರೆಗೆ 4 ಕಿ. ಗ್ರಾಂ ಪ್ರಮಾಣದಲ್ಲಿ ಅಥವಾ ಎಕರೆಗೆ 1– 1.5 ಟನ್ ಸಕ್ಕರೆ ಕಾರ್ಖಾನೆ ಮಡ್ಡಿಗೊಬ್ಬರ ಹರಡುವುದರಿಂದ ತರಗನ್ನು ತ್ವರಿತವಾಗಿ ಕಳೆಯಿಸಬಹುದು. |
| ತೆಂಗು | ರುಗೋಸ್ ಬಿಳಿ ನೊಣ | ಬಿಳಿ ನೊಣಗಳು ಎಲೆಗಳ ಕೆಳಭಾಗದಲ್ಲಿ ರಸವನ್ನು ಹೀರುತ್ತವೆ. ಹೆಚ್ಚು ರಸಹೀರುವುದರಿಂದ ಸಿಹಿಯಾದದ್ರವ್ಯವನ್ನು ಹೊರಹಾಕುತ್ತದೆ, ಇದು ಕಪ್ಪು ಶಿಲೀಂದ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಸಸ್ಯದ ದ್ಯುತಿಸಂಶ್ಲೇಷಣೆ ಮೇಲೆ ಪರಿಣಾಮ ಬೀರುತ್ತದೆ.<br>2.5% ಮೈದಾ ಪೇಸ್ಟ್ ದ್ರಾವಣವನ್ನು ಡಿಟರ್ಜೆಂಟ್/ಖಾದಿ ಸೋಪ್ @ 5 ಗ್ರಾಂ/ಲೀ ನೊಂದಿಗೆ ಬೆರೆಸಿ ಸಿಂಪಡಿಸುವ ಮೂಲಕ ಎಲೆಯ ಮೇಲ್ಮೈಯಲ್ಲಿ ಕಪ್ಪು ಶಿಲೀಂಧ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಹೊರಹಾಕಬಹುದು. ಹೆಚ್ಚು ಹಾನಿಯಾದಲ್ಲಿ, ಬೇವಿನ ಎಣ್ಣೆ 0.5% ಅಥವಾ NSKE 5% ಅನ್ನು ಸಿಂಪಡಿಸುವುದು. |

- ಬೆಳಗಿನ ಜಾವ ಹಾಗೂ ರಾತ್ರಿ ವೇಳೆ ಉಷ್ಣಾಂಶದಲ್ಲಿ ಸ್ವಲ್ಪ ಇಳಿತವಿರುವುದರಿಂದ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ವಿದ್ಯುತ್ ಬಲ್ಬ್ ಅನ್ನು ಒದಗಿಸುವ ಮೂಲಕ ಕಾಪಾಡಿಕೊಳ್ಳುವುದು.
- ಎರೆಹುಳು ಸಾಕಾಣಿಕ ಘಟಕದಲ್ಲಿ ಹೆಚ್ಚಿನ ತೇವಾಂಶ ಇರದಂತೆ ಎಚ್ಚರಿಕೆ ವಹಿಸಬೇಕು. ಎರೆಕುಣಿಗಳಲ್ಲಿ ಎರೆಗೊಬ್ಬರ ಉತ್ಪಾದನೆಯಾಗುವವರೆಗೆ ಶೇ. 60–70 ರಷ್ಟು ತೇವಾಂಶ ಇರುವ ಹಾಗೆ ನೋಡಿಕೊಳ್ಳಬೇಕು.

- ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನುಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ., ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು